


ಮಾಸ್ತಿ, ಕುವೆಂಪು, ಬೇಂದ್ರೆಯವರನ್ನು ಮಾತ್ರ. ಆನಂತರದಲ್ಲಿ ಚರ್ಚೆ ಮಾಡುವುದು ಪ್ರಗತಿಶೀಲರನ್ನು.

## ಮುರಿದುಕಟ್ಟುವ ಮತ್ತು ಪರಸ್ಪರ ಹೋಲುವ ಕ್ರಿಯೆಗಳು

ವಾಸ್ತವವಾಗಿ ಕಥೆಯ ಮನೋಧರ್ಮಕ್ಕೆ ಅನುಗುಣವಾಗಿ ಮತ್ತು ತಾತ್ವಿಕ ನೆಲೆಗಟ್ಟುಗಳಿಂದ ಆಶಯಗಳನ್ನು ಮತ್ತು ಆಕೃತಿಗಳನ್ನು ಮುರಿದುಕಟ್ಟುವ ಕೆಲಸವನ್ನೇ ಲಂಕೇಶ, ಅನಂತಮೂರ್ತಿ, ತೇಜಸ್ವಿ, ಆಲನಹಳ್ಳಿ ಕೃಷ್ಣ, ಖಾಸನೀಸ್, ದೇವನೂರು ಮಹಾದೇವ(ಇದು ಕಥಾಸಾಹಿತ್ಯದ ಸಮಗ್ರ ಅಧ್ಯಯನ ಅಲ್ಲವಾದ್ದರಿಂದ ಎಲ್ಲರ ಹೆಸರುಗಳನ್ನು ಹೇಳಿಲ್ಲ) ಹಾಗೂ ಮುಂದೆ ಬಂದ ಎಂಬತ್ತು ಮತ್ತು ತೊಂಬತ್ತರ ದಶಕದ ಕೆಲ ಕಥೆಗಾರರು ಸಮರ್ಥವಾಗಿ ಮಾಡಿದರು. ಈ ಕ್ರಮ, ಪರಂಪರೆಗೆ ತೋರಿಸುವ ಗೌರವ ಕೂಡ. 'ನಾಗರಬೆತ್ತ' ಮತ್ತು 'ತಬರನ ಕತೆ' ಇದಕ್ಕೊಂದು ಸೂಕ್ತ ನಿದರ್ಶನ. ಎರಡೂ ಕಥೆಗಳು ಬ್ರಿಟೀಷ್ ಆಳ್ವಿಕೆಯನ್ನು ವಸ್ತುವಾಗಿಸಿಕೊಂಡು ಸಾಂಕೇತಿಕವಾಗಿ ಮನುಷ್ಯ ಬದುಕಿನ ತಾಕಲಾಟಗಳನ್ನು ಹೇಳುತ್ತವೆ. ಆದರೆ, ನಾಗರಬೆತ್ತ ಬಿಗಿಯಾದ ಬಂಧದಿಂದ ಸ್ವಗತ ಮಾರ್ಗದಲ್ಲೇ ಎರಡು ಕಥೆಗಳನ್ನು ಅಭಿವ್ಯಕ್ತಿಸುತ್ತದೆ. ಒಂದು, ಹುಡುಗನದು ಮತ್ತೊಂದು, ದೇವಜ್ಜಿಯದು. ಹುಡುಗನ ಮನೋಲೋಕದ ಅರ್ಧಭಾಗ ಹೆಚ್ಚು ನಿಸರ್ಗ ಸಾಂಗತ್ಯದೊಂದಿಗೆ ಸಾಗುತ್ತದೆ. ದೇವಜ್ಜಿಯ ಮನೋಲೋಕ ದ್ವಂದ್ವ ಬಗೆಯದು. ಗಂಡ ಒಂದು ಕಾಲಕ್ಕೆ ಆಂಗ್ಲರ ಅಧಿಕಾರವನ್ನು ಒಪ್ಪಿಕೊಂಡವನು. ಆದರೆ, ಸ್ಥಳೀಯತೆಯ ಮೌಲ್ಯವಾಗಿದ್ದ ಮತ್ತು ನಂಬಿಕೆಯಾಗಿದ್ದ 'ನಾಗರಬೆತ್ತ'ದಿಂದ ಆತನ ಸಾವಾಗುತ್ತೆ. ಮನುಷ್ಯತ್ವ, ಸ್ಥಳೀಯನಂಬಿಕೆ ಮತ್ತು ಅಂದಿನ ವಸಾಹತು ಪಲ್ಲಟಗಳನ್ನು ಬಹಳ ಎಚ್ಚರದಿಂದ ಸೇಡಿಯಾಪು ನಿರ್ವಹಿಸುತ್ತಾರೆ. ಈ ಕಥೆಯಲ್ಲಿ ಸಂಶೋಧನಾ ಮನಸ್ಸು ಮತ್ತು ಕಲಾವಿದನ ಮನಸ್ಸು ಒಟ್ಟುಗೂಡಿದಂತೆ ಕಾಣುತ್ತವೆ. ಇದನ್ನು ಬೇರೊಂದು ತಾತ್ವಿಕ ನೆಲೆಗಟ್ಟಿನಲ್ಲಿ ಮಧ್ಯಮವರ್ಗದ ಮೂಲಕ ತೇಜಸ್ವಿ 'ತಬರನ ಕತೆ'ಯನ್ನು ಕಟ್ಟುತ್ತಾರೆ. ಇಲ್ಲಿ ಬರುವ ಬ್ರಿಟೀಷ್ ಆಡಳಿತ ನೆಪವಾಗಿ ಭಾರತೀಯ ರಾಜಕಾರಣದ ಸಂಕರದ ಸ್ಥಿತಿಯೊಂದು ತಬರನ ಮನಸ್ಸನ್ನು ಘಾಸಿಗೊಳಿಸಿಬಿಡುತ್ತದೆ ಮತ್ತು ದುರಂತಮಯವಾಗಿಸಿಬಿಡುತ್ತದೆ. ಆಧುನಿಕತೆ ಮತ್ತು ಸ್ವಾತಂತ್ರ್ಯ ಎಂಬ ಎರಡೂ ವ್ಯವಸ್ಥೆಗಳು ಏಕಕಾಲಕ್ಕೆ ಚಿಕಿತ್ಸೆಗೆ ಒಳಪಡುತ್ತವೆ. ಇವೆರಡನ್ನು ನಾವು ಆರಂಭದಲ್ಲಿ ಭಾರತೀಯ ಮನುಷ್ಯನನ್ನು ಬಿಡುಗಡೆಗೊಳಿಸಲು ಬಂದಿರುವ ದೊಡ್ಡ ಪದ್ಧತಿಗಳೆಂದೇ ಭಾವಿಸಲಾಗಿತ್ತು. ಆದರೆ, ಅದು ಸಮಗ್ರವಾಗಿ ಯಶಸ್ವಿಯಾಯಿತೇ ಎಂಬುದು 'ತಬರನ ಕತೆ' ದರ್ಶನ ಮಾಡಿಸುತ್ತದೆ. ಆರಂಭದಲ್ಲಿ ನವ್ಯ ಎಂದು ಕರೆಯಬಹುದಾದ ಕಥನಗಳು ತೀರ ವ್ಯಕ್ತಿಕೇಂದ್ರಿತವಾಗಿ, ಅಂತರ್ಮುಖತ್ವದಿಂದ ನರಳಿದರೂ ತದನಂತರದಲ್ಲಿ ಅನೇಕ ಮುಖ್ಯ ಕಥೆಗಾರರು ಇವುಗಳನ್ನು ಮುರಿದುಕಟ್ಟಿ ಈ ನೆಲದ ಬದುಕಿನ ನಿಜವಾದ ಬಿರುಕುಗಳನ್ನು ಅನಾವರಣ ಮಾಡಿದರು. ಈ ನಡುವೆ ವಸ್ತು ಮತ್ತು ಆಕೃತಿಗಳ ದೃಷ್ಟಿಯಿಂದ ಅದಾಗಲೇ ಮಾಸ್ತಿಯವರಿಗಿಂತ ಭಿನ್ನ ಹಾದಿ ತುಳಿದಿದ್ದು ಬಾಗಲೋಡಿ ದೇವರಾಯರ ಕಥನಗಳು. ಅವರ ಪಾತ್ರಗಳ ವಿಶಿಷ್ಟ ಮನಸ್ಥಿತಿ, ಸಮಾಜವನ್ನು ರೋಗಗ್ರಸ್ತ ರೀತಿಯಲ್ಲಿ ಗ್ರಹಿಸುವ ಕ್ರಮ, ಮನುಷ್ಯನ ಸಣ್ಣತನಗಳು, ಅಧಿಕಾರ, ಎಲ್ಲವನ್ನೂ ನವ್ಯರಂತೆ ಚಿತ್ರಿಸಿದರು. 'ಹುಚ್ಚು ಮುನಿಸೀಫ' ಕತೆ ಸಮಾಜ ಮತ್ತು ಮನುಷ್ಯನ